

بسم اللهِ الرّحمٰن الرّحيم

# ಮಕ್ಕಾ ವಿಜಯ: ಕಅಬದ ಕೀಲಿಗೈ ಘಟನೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **11-07-2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ.
أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ. بِسْمِ اللّٰهِ الرَّحْمٰنِ الرَّحِيْمِ.
اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.
اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರ್‌ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಕಳೆದ ಖುತ್ಬದಲ್ಲಿ ಹೇಳಿದಂತೆ, ಕಅಬದ ಕೀಲಿಗೈ ಉಸ್ಮಾನ್ ಬಿನ್ ತಲ್‌ಹರ ಬಳಿ ಇತ್ತು. ಮಕ್ಕಾ ವಿಜಯದ ವೇಳೆ ಹಝ್ರ್‌ರತ್ ಅಲಿ(ರ), ಸಖಾಯಾ (ಹಾಜಿಗಳಿಗೆ ನೀರು ಕುಡಿಸುವ) ಜವಾಬ್ದಾರಿಯ ಜೊತೆಗೆ ಕಅಬದ ಕೀಲಿಗೈ ಇರಿಸುವ ಗೌರವವನ್ನು ಕೂಡ ತನಗೆ ನೀಡಬೇಕೆಂದು ಕೋರಿದರು; ಅಂದರೆ, ಕೀಲಿಗೈಯನ್ನು ತನಗೆ ಕೊಡಬೇಕೆಂದು ಕೇಳಿದರು. ಆದರೆ, ಹಝ್ರ್‌ರತ್ ಪೈಗಂಬರ್(ಸ) ಕಅಬದಿಂದ ಹೊರಬರುವಾಗ ಉಸ್ಮಾನ್ ಬಿನ್ ತಲ್‌ಹರನ್ನು ಕರೆದು, ಅವರಿಗೆ ಕೀಲಿಗೈಯನ್ನು ಹಿಂದಿರುಗಿಸುತ್ತಾ ಹೀಗೆ ಹೇಳಿದರು: "**ಅಲ್ ಯೌಮು ಯೌಮುಲ್ ಬಿರ್ರಿ ವ ವಫಾಇ**" – ಅಂದರೆ, "ಇಂದು ಸದ್ಗುಣ ಮತ್ತು ಒಪ್ಪಂದಗಳನ್ನು ಪೂರೈಸುವ ದಿನವಾಗಿದೆ." ಆ ಸಮಯದಲ್ಲಿ ಉಸ್ಮಾನ್ ಬಿನ್ ತಲ್‌ಹ ಮುಸ್ಲಿಮರಾಗಿದ್ದರು.

ಹಝ್ರ್‌ರತ್ ಪೈಗಂಬರ್(ಸ) ಹೀಗೆ ಹೇಳಲು ಕಾರಣವೇನೆಂದರೆ, ಹಿಜ್ರತ್‌ಗೆ ಮೊದಲು ಒಮ್ಮೆ ಹಝ್ರ್‌ರತ್ ಪೈಗಂಬರ್(ಸ) ಉಸ್ಮಾನ್ ಬಿನ್ ತಲ್‌ಹರಿಂದ ಕಅಬದ ಕೀಲಿಗೈಯನ್ನು ಕೇಳಿದಾಗ, ಅವರು ಹಝ್ರ್‌ರತ್ ಪೈಗಂಬರ್(ಸ)ರನ್ನು ನಿಂದಿಸಿದ್ದರು ಮತ್ತು ಅತ್ಯಂತ ಅಸಭ್ಯ ಭಾಷೆಯಲ್ಲಿ ಬೈದಿದ್ದರು. ಹಝ್ರ್‌ರತ್ ಪೈಗಂಬರ್(ಸ) ಆ ಸಮಯದಲ್ಲಿ ಅತ್ಯಂತ ತಾಳ್ಮೆಯಿಂದ ವರ್ತಿಸಿ ಹೀಗೆ ಹೇಳಿದರು: "ಎಲೈ ಉಸ್ಮಾನ್, ನೆನಪಿಟ್ಟುಕೋ, ಈ ಕೀಲಿಗೈ ಒಂದು ದಿನ ನನ್ನ ಕೈಗೆ ಬರುವುದು. ಆಗ ನಾನು ಅದನ್ನು ನನ್ನ ಇಷ್ಟ ಪ್ರಕಾರ ಯಾರಿಗೆ ಬೇಕಾದರೂ ಕೊಡುವೆನು." ಉಸ್ಮಾನ್ ಆಗ ಹೀಗೆ ಉತ್ತರಿಸಿದ್ದರು: "ಅಂತಹ ಸಮಯ ಬಂದರೆ, ಅದು ಖುರೈಶಿಯರ ನಾಶ ಮತ್ತು ಅವಮಾನದ ಕಾಲವಾಗಿರುವುದು." ಈ ಮಾತಿಗೆ ಉತ್ತರಿಸುತ್ತಾ ಹಝ್ರ್‌ರತ್ ಪೈಗಂಬರ್(ಸ) ಹೇಳಿದರು: "ಹಾಗಲ್ಲ, ಬದಲಾಗಿ ಆ ಸಮಯದಲ್ಲಿ ಖುರೈಶಿಯರ ಸಮೃದ್ಧಿ ಮತ್ತು ಗೌರವ ಹೆಚ್ಚುವುದು."

ಹಝ್ರ್‌ರತ್ ಪೈಗಂಬರ್(ಸ)ರ ಮೇಲೆ ಆ ಕಾಲದಲ್ಲಿ ನಡೆದ ಎಲ್ಲ ಅತಿರೇಕಗಳು ಅವರಿಗೆ ನೆನಪಿದ್ದವು, ಆದರೂ ಕೂಡ ಹಝ್ರ್‌ರತ್ ಪೈಗಂಬರ್(ಸ) ಆ ಜನರ ಮೇಲೆ ಕರುಣೆ ಮತ್ತು ದಯೆ ತೋರಿದರು. ಹಝ್ರ್‌ರತ್ ಪೈಗಂಬರ್(ಸ) ಉಸ್ಮಾನ್ ಬಿನ್ ತಲ್‌ಹರೊಡನೆ ಹೀಗೆ ಹೇಳಿದರು: "ಈ ಕೀಲಿಗೈಯನ್ನು ನೀನೇ ಇರಿಸಿಕೋ. ಅನ್ಯಾಯಗಾರನು ಮಾತ್ರವೇ ಅದನ್ನು ನಿನ್ನಿಂದ ಕಸಿದುಕೊಳ್ಳಲು ಸಾಧ್ಯ. ಇನ್ನು ಮುಂದೆ ಇದು ನಿನ್ನ ಕುಟುಂಬದಲ್ಲಿಯೇ ಇರುವುದು." ಹಾಗೆ ಇಂದಿಗೂ ಕಅಬ ಭವನದ ಕೀಲಿಗೈ ಇದೇ ಕುಟುಂಬದಲ್ಲಿ ತಲೆಮಾರುಗಳಿಂದ ಇದೆ.

ಒಂದು ವರದಿಯ ಪ್ರಕಾರ, ಮಕ್ಕಾ ವಿಜಯದ ಎರಡನೇ ದಿನ ಬನೂ ಖುಝಾಅ ಗೋತ್ರದವರು ಬನೂ ಬದೀಲ್‌ನ ಒಬ್ಬ ಮುಶ್ರಿಕ್ ವ್ಯಕ್ತಿಯನ್ನು ಕೊಂದರು. ಆಗ ಹಝ್ರ್‌ರತ್ ಪೈಗಂಬರ್(ಸ) ಝುಹ್ರ್ ನಮಾಝಿನ ನಂತರ ಖುತ್ಬ ನೀಡಲು ನಿಂತರು. ಹಝ್ರ್‌ರತ್ ಪೈಗಂಬರ್(ಸ) ಅಲ್ಲಾಹನನ್ನು ಸ್ತುತಿಸಿದ ನಂತರ ಹೀಗೆ ಹೇಳಿದರು: "ಎಲೈ ಜನರೇ, ಅಲ್ಲಾಹನು ಆಕಾಶಗಳು ಮತ್ತು ಭೂಮಿಯನ್ನು ಸೃಷ್ಟಿಸಿದ, ಸೂರ್ಯ-ಚಂದ್ರರನ್ನು ಸೃಷ್ಟಿಸಿದ ಮತ್ತು ಸಫಾ ಹಾಗೂ ಮರ್ವಾ ಎಂಬ ಈ ಎರಡು ಪರ್ವತಗಳನ್ನು ಸ್ಥಾಪಿಸಿದ ದಿನದಂದೇ ಮಕ್ಕಾವನ್ನು 'ಹರಮ್' (ಪವಿತ್ರ ಸ್ಥಳ) ಆಗಿ ಮಾಡಿದ್ದಾನೆ. ಇದನ್ನು ಜನರು ಹರಮ್ ಮಾಡಿಲ್ಲ, ಬದಲಾಗಿ ಅಲ್ಲಾಹನು ಮಾಡಿದ್ದಾನೆ. ಇದು ಪುನರುತ್ಥಾನ ದಿನದ ವರೆಗೂ ಹರಮ್ ಆಗಿರುವುದು. ಆದ್ದರಿಂದ, ಅಲ್ಲಾಹನ ಮೇಲೆ ಮತ್ತು ಅಂತಿಮ ದಿನದ ಮೇಲೆ ನಂಬಿಕೆ ಇಟ್ಟಿರುವ ಯಾವನೇ ವ್ಯಕ್ತಿಗೂ ಇಲ್ಲಿ ರಕ್ತಪಾತ ಮಾಡುವುದು ಅಥವಾ ಅದರ ಮರಗಳನ್ನು ಕತ್ತರಿಸುವುದು ಹಲಾಲ್ ಅಲ್ಲ (ಅನುಮತನೀಯವಲ್ಲ). ಇದು ನನಗೆ ಮೊದಲು ಯಾರಿಗೂ ಹಲಾಲ್ ಆಗಿರಲಿಲ್ಲ ಮತ್ತು ನನ್ನ ನಂತರವೂ ಯಾರಿಗೂ ಹಲಾಲ್ ಆಗದು. ನನಗೆ ಒಂದು ಕ್ಷಣಕ್ಕೆ ಹಲಾಲ್ ಆಗಿತ್ತು. ನಂತರ ಅದರ ಪಾವಿತ್ರ್ಯವನ್ನು ಹಿಂದಿನಂತೆ ಮರಳಿಸಲಾಯಿತು. ನಿಮ್ಮಲ್ಲಿರುವವರು ಈ ಸಂದೇಶವನ್ನು ಇಲ್ಲಿ ಹಾಜರಿಲ್ಲದವರಿಗೆ ತಲುಪಿಸಲಿ. ಪೈಗಂಬರರು ಇಲ್ಲಿ ಯುದ್ಧ ಮಾಡಿದ್ದರು ಎಂದು ನಿಮ್ಮೊಡನೆ ಯಾರಾದರೂ ಹೇಳಿದರೆ, 'ಅಲ್ಲಾಹನು ಅದನ್ನು ತನ್ನ ರಸೂಲ್‌ಗಾಗಿ ಮಾತ್ರ ಹಲಾಲ್ ಮಾಡಿದ್ದನು. ಆದರೆ ಅವನು ಅದನ್ನು ನಿಮಗಾಗಿ ಹಲಾಲ್ ಮಾಡಿಲ್ಲ' ಎಂದು ಅವರೊಡನೆ ಹೇಳಿರಿ. ಎಲೈ ಜನರೇ, ಹರಮ್‌ನಲ್ಲಿ ಕೊಲೆ ಮಾಡಿದವನು ಅಥವಾ ಕೊಲೆಗಾರನನ್ನಲ್ಲದೆ ಬೇರೊಬ್ಬನನ್ನು ಕೊಂದವನು ಅಥವಾ ಜಾಹಿಲಿಯಃ (ಅಜ್ಞಾನದ ಅವಧಿ)

ಕಾಲದ ರಕ್ತದ ಸೇಡಿನ ಕಾರಣದಿಂದ ಕೊಂದವನು ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ದೊಡ್ಡ ಅಪರಾಧಿಯಾಗಿದ್ದಾನೆ.

"ಎಲೈ ಬನು ಖುಝಾಅ, ಕೊಲೆ ಮಾಡುವುದರಿಂದ ಹಿಂದೆ ಸರಿಯಿರಿ. ನೀವು ಒಬ್ಬ ವ್ಯಕ್ತಿಯನ್ನು ಕೊಂದಿದ್ದೀರಿ. ನಾನು ಅವನ 'ದಿಯ್ಯತನ್ನು' (ಪರಿಹಾರ ಧನ) ಪಾವತಿಸುತ್ತೇನೆ. ನನ್ನ ಭರವಸೆಯ ನಂತರವೂ ಯಾರಾದರೂ ಇನ್ನೊಬ್ಬನನ್ನು ಕೊಂದರೆ, ಆ ಕುಟುಂಬಕ್ಕೆ ಎರಡು ಆಯ್ಕೆಗಳಿರುವುವು. ಅವರು ಬೇಕಾದರೆ ದಿಯ್ಯತ್ ತೆಗೆದುಕೊಳ್ಳಬಹುದು ಅಥವಾ ಕೊಲೆಗಾರನನ್ನು ವಧಿಸಬಹುದು." ಅನಂತರ ಬನೂ ಖುಝಾಅ ಗೋತ್ರದವರು ಕೊಂದ ವ್ಯಕ್ತಿಗೆ ಪ್ರತಿಯಾಗಿ ಹಝ್ರತ್ ಪೈಗಂಬರ್(ಸ) ನೂರು ಒಂಟೆಗಳನ್ನು ದಿಯ್ಯತ್ ಆಗಿ ನೀಡಿದರು; ಬನೂ ಖುಝಾಅ ಗೋತ್ರದ ಪರವಾಗಿ ಹಝ್ರತ್ ಪೈಗಂಬರ್(ಸ) ಪರಿಹಾರಧನವನ್ನು ನೀಡಿದರು.

ಇದೇ ದಿನಗಳಲ್ಲಿ, ಹಝ್ರತ್ ಪೈಗಂಬರ್(ಸ)ರನ್ನು ವಧಿಸಲು ಫುಝಾಲಾ ಬಿನ್ ಉಮೈರ್ ನಡೆಸಿದ ದುಷ್ಟ ಯೋಜನೆ ಕೂಡ ಬಯಲಾಯಿತು. ಅವರು ಹೀಗೆ ಹೇಳುತ್ತಾರೆ: "ಹಝ್ರತ್ ಪೈಗಂಬರ್(ಸ) ಕಅಬ ಭವನದ ತವಾಫ್ (ಪ್ರದಕ್ಷಿಣೆ) ಮಾಡುತ್ತಿದ್ದಾಗ, ನಾನು ಕೂಡ ಆ ಜನಸಂದಣಿಯಲ್ಲಿ ಹಝ್ರತ್ ಪೈಗಂಬರ್(ಸ)ರನ್ನು ಚೂರಿಯಿಂದ ವಧಿಸುವ ಉದ್ದೇಶದಿಂದ ಅವರನ್ನು ಹಿಂಬಾಲಿಸಿದೆ. ನಾನು ಹಝ್ರತ್ ಪೈಗಂಬರ್(ಸ)ರಿಗೆ ಸಮೀಪವಾದಾಗ ಅವರು ನನ್ನನ್ನು ನೋಡಿ, 'ನೀನು ಫುಝಾಲಾ ಅಲ್ಲವೇ' ಎಂದು ಕೇಳಿದರು. 'ಹೌದು' ಎಂದು ನಾನು ಹೇಳಿದೆ. ನೀನು ಮನಸ್ಸಿನಲ್ಲಿ ಏನನ್ನು ಯೋಚಿಸುತ್ತಿದ್ದೀಯಾ?' ಎಂದು ಹಝ್ರತ್ ಪೈಗಂಬರ್(ಸ) ಕೇಳಿದರು. 'ನಾನು ಅಲ್ಲಾಹನನ್ನು ಸ್ಮರಿಸುತ್ತಿದ್ದೆ' ಎಂದು ನಾನು ಸುಳ್ಳು ಹೇಳಿದೆ. ಆಗ ಹಝ್ರತ್ ಪೈಗಂಬರ್(ಸ) ಮುಗುಳ್ನಕ್ಕು, 'ಅಲ್ಲಾಹನಿಂದ ಕ್ಷಮೆ ಯಾಚಿಸು. ನೀನು ಹೇಳುತ್ತಿರುವುದನ್ನು ನೀನು ಮಾಡುತ್ತಿಲ್ಲ' ಎಂದು ಹೇಳಿದರು. ಹಝ್ರತ್ ಪೈಗಂಬರ್(ಸ) ಹತ್ತಿರ ಬಂದು ನನ್ನ ಎದೆಯ ಮೇಲೆ ಕೈ ಇಟ್ಟರು. ಅಲ್ಲಾಹನ ಮೇಲೆ ಆಣೆ ಹಾಕಿ ಹೇಳುತ್ತೇನೆ. ಹಝ್ರತ್ ಪೈಗಂಬರ್(ಸ) ನನ್ನ ಎದೆಯಿಂದ ಕೈ ತೆಗೆಯುವ ಮೊದಲೇ ಈ ಲೋಕದಲ್ಲಿ ನನಗೆ ಮುಹಮ್ಮದ್(ಸ)ಗಿಂತ ಹೆಚ್ಚು ಪ್ರಿಯರು ಯಾರೂ ಇಲ್ಲವೆಂದು ಅನುಭವವಾಗುತ್ತಿತ್ತು ನಾನು ನನ್ನ ಕುಟುಂಬದ ಬಳಿಗೆ ಹಿಂತಿರುಗುವ ಸಮಯದಲ್ಲಿ ನನ್ನ ಮನಸ್ಸು ಸಂಪೂರ್ಣವಾಗಿ ಬದಲಾಗಿತ್ತು."

ಇದೇ ದಿನಗಳಲ್ಲಿ ಹಝ್ರತ್ ಅಬೂಬಕರ್(ರ)ರ ತಂದೆ ಇಸ್ಲಾಂ ಸ್ವೀಕರಿಸಿದ ಘಟನೆಯೂ ಉಲ್ಲೇಖಿಸಲ್ಪಟ್ಟಿದೆ.

ಹಝ್ರತ್ ಉಮ್ಮು ಹಾನಿ(ರ)ರ ಮನೆಯಲ್ಲಿ ಹಝ್ರತ್ ಪೈಗಂಬರ್(ಸ) ಊಟ ಮಾಡಿದ ಘಟನೆಯೂ ಉಲ್ಲೇಖವಾಗಿದೆ. ಹಝ್ರತ್ ಇಬ್ನ್ ಅಬ್ಬಾಸ್(ರ)ರಿಂದ ಹೀಗೆ ವರದಿಯಾಗಿದೆ: ಮಕ್ಕಾ ವಿಜಯದ ದಿನದಂದು ಹಝ್ರತ್ ಪೈಗಂಬರ್(ಸ) ಹಝ್ರತ್ ಉಮ್ಮು ಹಾನಿ(ರ)ರೊಡನೆ ಹೀಗೆ ಕೇಳಿದರು: "ನಿನ್ನ ಬಳಿ ನಮಗೆ ತಿನ್ನಲಿಕ್ಕಾಗಿ ಏನಾದರೂ ಆಹಾರವಿದೆಯೇ?" ಅವರು ಹೇಳಿದರು: "ಒಣಗಿದ ರೊಟ್ಟಿ ತುಂಡುಗಳನ್ನು ಹೊರತುಪಡಿಸಿ ಬೇರೇನೂ ಇಲ್ಲ, ಅವುಗಳನ್ನು ನಿಮ್ಮ ಮುಂದೆ ಇಡಲು ನನಗೆ ನಾಚಿಕೆಯಾಗುತ್ತಿದೆ". "ಅದನ್ನೇ ತಂದಿಡು" ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಹಝ್ರತ್ ಪೈಗಂಬರ್(ಸ) ಅವುಗಳನ್ನು ನೀರಿನಲ್ಲಿ ನೆನೆಸಿದರು. ಹಝ್ರತ್ ಉಮ್ಮು ಹಾನೀ(ರ) ಉಪ್ಪು ತಂದರು. ಏನಾದರೂ ಸಾರು ಇದೆಯೇ? ಎಂದು ಹಝ್ರತ್ ಪೈಗಂಬರ್(ಸ) ಕೇಳಿದರು. ಹಝ್ರತ್ ಉಮ್ಮು ಹಾನೀ(ರ) ಹೇಳಿದರು: "ಅಲ್ಲಾಹನ ದೂತರೇ, ನನ್ನ ಬಳಿ ವಿನೆಗರ್ ಹೊರತುಪಡಿಸಿ ಬೇರೇನೂ ಇಲ್ಲ." "ಆ ವಿನೆಗರನ್ನು ತೆಗೆದುಕೊಂಡು ಬಾ" ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಹಝ್ರತ್ ಪೈಗಂಬರ್(ಸ) ಅದನ್ನು ಆಹಾರದ ಮೇಲೆ ಸುರಿದು ತಿಂದು ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಿದರು. ಅನಂತರ ಹೇಳಿದರು: "ವಿನೆಗರ್ ಎಷ್ಟು ಉತ್ತಮವಾದ ಸಾರು! ಹೇ ಉಮ್ಮು ಹಾನಿ, ಯಾವ ಮನೆಯಲ್ಲಿ ವಿನೆಗರ್ ಇದೆಯೋ, ಅದು ಬಡವರ ಮನೆಯಲ್ಲ." (ಹುಝೂರ್ ಅನ್ವರ್ ಹೇಳಿದರು:) ಇದು ಕೃತಜ್ಞತೆಯ ಪರಾಕಾಷ್ಠೆಯಾಗಿದೆ. ಅದರ ಜೊತೆಗೆ ಉಮ್ಮು ಹಾನಿ(ರ)ರನ್ನು ಕೂಡ ಸಂತೋಷಪಡಿಸಲಾಯಿತು. ಇದು ಮಕ್ಕಾ ವಿಜೇತರಾದ ಹಝ್ರತ್ ಪೈಗಂಬರ್(ಸ)ರ ಸ್ಥಿತಿಯಾಗಿದೆ, ಎಲ್ಲ ಮನೆಯಿಂದಲೂ ಎಲ್ಲವೂ ಸಿಗಬಹುದಾಗಿದ್ದರೂ, ಹಝ್ರತ್ ಪೈಗಂಬರ್(ಸ) ಆ ಚಿಕ್ಕ ಒಣ ರೊಟ್ಟಿ ತುಂಡುಗಳನ್ನು ತಿಂದು ತೃಪ್ತಿಪಟ್ಟರು.

ಹಝ್ರತ್ ಪೈಗಂಬರ್(ಸ) ಮಕ್ಕಾ ತಲುಪಿ, ಅಲ್ಲಿನ ಪ್ರತಿಯೊಂದು ವಸ್ತುವನ್ನು, ವಿಶೇಷವಾಗಿ ಕಅಬವನ್ನು ಪ್ರೀತಿಯಿಂದ ನೋಡಿದಾಗ, ಹಝ್ರತ್ ಪೈಗಂಬರ್(ಸ) ಇಲ್ಲಿಯೇ ಉಳಿದುಬಿಡುವರೋ ಎಂಬ ಆತಂಕ ಅನ್ಸಾರರ ಹೃದಯದಲ್ಲಿ ಮೂಡಿತು. ಹಝ್ರತ್ ಅಬೂ ಹುರೈರಾ(ರ) ಹೇಳುತ್ತಾರೆ: ಅನ್ಸಾರರ ಸ್ಥಿತಿ ಹೀಗೆ ಆದಾಗ, ಹಝ್ರತ್ ಪೈಗಂಬರ್(ಸ)ರಿಗೆ ವಹ್ಯ್ ಅವತೀರ್ಣವಾಯಿತು. ಈ ದಿವ್ಯ ಸಂದೇಶ ಮುಕ್ತಾಯಗೊಂಡಾಗ, ಹಝ್ರತ್ ಪೈಗಂಬರ್(ಸ) ಹೀಗೆ ಕೇಳಿದರು: "ಎಲೈ ಅನ್ಸಾರ್ ಸಮೂಹವೇ, ನನಗೆ ಸ್ವದೇಶದ ಪ್ರೀತಿ ಉಕ್ಕಿ ಬಂದಿದೆ ಎಂದು ನೀವು ಯೋಚಿಸುತ್ತಿದ್ದೀರಾ?" ಹೌದೆಂದು ಅನ್ಸಾರರು ಹೇಳಿದರು. ಹಝ್ರತ್ ಪೈಗಂಬರ್(ಸ) ಕೇಳಿದರು: "ಹಾಗೆ ಆದರೆ ನನ್ನ ಹೆಸರೇನಾಗಿರುವುದು? ನಾನು ಮುಹಮ್ಮದ್ ಆಗಿರುವೆನು ಹಾಗೂ ಅಲ್ಲಾಹನ ದಾಸ ಮತ್ತು ಅವನ ದೂತನಾಗಿರುವೆನು. ನಾನು ಅಲ್ಲಾಹನಿಗಾಗಿ ನಿಮ್ಮ ಕಡೆಗೆ ಹಿಜ್ರತ್ (ವಲಸೆ) ಮಾಡಿದ್ದೆ. ಈಗ ನನ್ನ ಜೀವನ–ಮರಣ ನಿಮ್ಮೊಂದಿಗೇ ಆಗಿದೆ." ಇದನ್ನು ಕೇಳಿ ಅವರು ಅನಿಯಂತ್ರಿತವಾಗಿ ಅಳುತ್ತಾ ಹಝ್ರತ್ ಪೈಗಂಬರ್(ಸ)ರ ಕಡೆಗೆ ಧಾವಿಸಿದರು ಮತ್ತು ಹೀಗೆ ಹೇಳಿದರು: "ಅಲ್ಲಾಹನ ಆಣೆ! ನಾವು ಏನನ್ನು ಹೇಳಿದೆವೋ,

ಅದು ಅಲ್ಲಾಹನ ಮತ್ತು ಅವನ ಪೈಗಂಬರರ ಮೇಲಿನ ಅತಿಯಾದ ಪ್ರೀತಿಯಿಂದ ಮತ್ತು ನಿಮ್ಮನ್ನು ಅಗಲುವ ಭಯದಿಂದಲೇ ಹೇಳಿದ್ದೇವೆ". ಹಝ್ರತ್ ಪೈಗಂಬರ್(ಸ) ಹೇಳಿದರು: "ಖಂಡಿತವಾಗಿಯೂ! ಅಲ್ಲಾಹನು ಮತ್ತು ಅವನ ದೂತ ನಿಮ್ಮ ಈ ಮಾತನ್ನು ಸತ್ಯವೆಂದು ಸಮ್ಮತಿಸುತ್ತಾರೆ ಮತ್ತು ನೀವು ಹೇಳಿರುವ ಕಾರಣವನ್ನು ಒಪ್ಪಿಕೊಳ್ಳುತ್ತಾರೆ."

ಝುಹ್ರ್ ನಮಾಝಿನ ಸಮಯವಾದಾಗ, ಹಝ್ರತ್ ಪೈಗಂಬರ್(ಸ) ಹಝ್ರತ್ ಬಿಲಾಲ್(ರ)ರೊಡನೆ ಅಧಾನ್ ನೀಡಲು ಆದೇಶಿಸಿದರು. ಆಗ ಅವರು ಕಅಬದ ಛಾವಣಿಯ ಮೇಲೆ ಹತ್ತಿ ಅಧಾನ್ ಕೊಟ್ಟರು. ಒಂದು ವರದಿಯ ಪ್ರಕಾರ, ಹಝ್ರತ್ ಪೈಗಂಬರ್(ಸ) ಆ ದಿನದ ಎಲ್ಲ ನಮಾಝ್‌ಗಳನ್ನು ಒಂದೇ ವುಝೂವಿನಿಂದ ನಿರ್ವಹಿಸಿದರು. ಹಝ್ರತ್ ಉಮರ್(ರ) ಹೇಳಿದರು: "ಅಲ್ಲಾಹನ ದೂತರೇ, ನೀವು ಹಿಂದೆಂದೂ ಮಾಡದಿರುವುದನ್ನು ಇಂದು ಮಾಡಿದ್ದೀರಿ." ಹಝ್ರತ್ ಪೈಗಂಬರ್(ಸ) ಹೇಳಿದರು: "ಹೇ ಉಮರ್, ನಾನು ಇದನ್ನು ಉದ್ದೇಶಪೂರ್ವಕವಾಗಿ ಮಾಡಿದ್ದೇನೆ." ಅಗತ್ಯವಿದ್ದಾಗ ಹೀಗೆ ಮಾಡಲು ಅನುಕೂಲ ಒದಗಿಸುವ ಸಲುವಾಗಿ ಹಝ್ರತ್ ಪೈಗಂಬರ್(ಸ) ಈ ಮಾದರಿಯನ್ನು ತೋರಿಸಿದ್ದರು ಎಂದು ಉಲಮಾಗಳು (ಧಾರ್ಮಿಕ ವಿದ್ವಾಂಸರು) ಹೇಳುತ್ತಾರೆ.

ಇದೇ ವೇಳೆ, ಹಝ್ರತ್ ಪೈಗಂಬರ್(ಸ) ಸಾರ್ವತ್ರಿಕ ಬೈಅತನ್ನು ಕೂಡ ಪಡೆದರು. ಅಲ್ಲಾಹನ ಮೇಲಿನ ನಂಬಿಕೆ ಮತ್ತು ಅಲ್ಲಾಹನ ಹೊರತಾಗಿ ಬೇರೆ ಆರಾಧ್ಯನಿಲ್ಲ ಹಾಗೂ ಮುಹಮ್ಮದ್(ಸ) ಅವನ ದಾಸ ಮತ್ತು ದೂತ ಎಂಬ ಸಾಕ್ಷ್ಯ ವಚನದೊಂದಿಗೆ ಹಝ್ರತ್ ಪೈಗಂಬರ್(ಸ) ಪುರುಷರಿಂದ ಬೈಅತ್ ಪ್ರತಿಜ್ಞೆ ಪಡೆದರು. ಪುರುಷರ ಪ್ರತಿಜ್ಞೆ ಮುಗಿದ ನಂತರ, ಹಝ್ರತ್ ಪೈಗಂಬರ್(ಸ) ಮಹಿಳೆಯರಿಂದ ಪ್ರತಿಜ್ಞೆ ಪಡೆದರು, ಆ ಮಹಿಳೆಯರಲ್ಲಿ ಅಬೂ ಸುಫಿಯಾನ್‌ನ ಪತ್ನಿ ಹಿಂದ್ ಕೂಡ ಇದ್ದರು.

(ಹುಝೂರ್ ಅನ್ವರ್ ಹೇಳಿದರು:) "ಯಾವ ಅಪರಾಧಿಗಳಿಗೆ ಮರಣದಂಡನೆ ವಿಧಿಸಲಾಗಿತ್ತೋ ಅವರ ಕುರಿತು ಬರೆಯಲ್ಪಟ್ಟಿದೆ. ಅದನ್ನು ನಾನು ವಿವರಿಸುತ್ತೇನೆ. ಇದರ ಬಗ್ಗೆ ಕೆಲವರಿಗೆ ಕೆಲವು ಸಂಶಯಗಳು ಇವೆ. ಇದಕ್ಕೆ ಸಂಬಂಧಪಟ್ಟ ಘಟನೆಗಳು ಕೂಡ ಇದನ್ನೇ ತಿಳಿಸುತ್ತವೆ. ಏಕೆಂದರೆ, ಮರಣದಂಡನೆಯ ಬಗ್ಗೆ ವಿವರಿಸಲಾದ ಕಾರಣಗಳು, ಹಝ್ರತ್ ಪೈಗಂಬರ್(ಸ)ರ ಕಾರ್ಯಶೈಲಿ ಮತ್ತು ಸ್ವಭಾವಕ್ಕೆ ವಿರುದ್ಧವಾಗಿವೆ.

ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಕುರಿತು ತಮ್ಮ ಅಭಿಪ್ರಾಯವನ್ನು ಹೀಗೆ ಬರೆದಿರುವರು: ಕೇವಲ ಹನ್ನೊಂದು ಪುರುಷರು ಮತ್ತು ನಾಲ್ಕು ಮಹಿಳೆಯರಿಗೆ ಸಂಬಂಧಪಟ್ಟು ಅವರು ತೀವ್ರ ದೌರ್ಜನ್ಯಕರವಾದ ಕೊಲೆ ನಡೆಸಿದ್ದಾಗಿಯೂ ಅಶಾಂತಿ ಹಬ್ಬಿದ್ದಾಗಿಯೂ ಸಾಬೀತಾಗಿತ್ತು. ಅವರು ಯುದ್ಧಾಪರಾಧಿಗಳಾಗಿದ್ದರು. ಅವರನ್ನು ವಧಿಸಬೇಕು ಎಂದು ಅವರ ಕುರಿತು ಹಝ್ರತ್ ಪೈಗಂಬರ್(ಸ) ಆದೇಶ ನೀಡಿದ್ದರು. ಏಕೆಂದರೆ ಅವರು ಕೇವಲ ಯೋಧರೂ ಅವಿಶ್ವಾಸಿಗಳೂ ಮಾತ್ರವಾಗಿರಲಿಲ್ಲ. ಬದಲಾಗಿ ಅವರು ಯುದ್ಧಾಪರಾಧಿಗಳಾಗಿದ್ದರು. ಆದರೆ, ಅವರಲ್ಲಿ ಹೆಚ್ಚಿನವರನ್ನು ಮುಸ್ಲಿಮರ ಶಿಫಾರಸ್ಸಿನಿಂದ ಹಝ್ರತ್ ಪೈಗಂಬರ್(ಸ) ಬಿಡುಗಡೆಗೊಳಿಸಿದರು.

(ಈ ಕುರಿತು ಆಕ್ಷೇಪಗಳು ಮತ್ತು ಅವುಗಳ ಖಂಡನೆಗಳನ್ನು ಪ್ರಸ್ತುತಪಡಿಸಿದ ನಂತರ, ಹುಝೂರ್ ಹೇಳಿದರು:) ಇಸ್ಲಾಂ ವಿರೋಧಿ ನಾಯಕರಾಗಿದ್ದ ಕೆಲವು ಖುರೈಶಿ ಮುಖ್ಯಸ್ಥರು, ಹಝ್ರತ್ ಪೈಗಂಬರ್(ಸ)ರ ಆಗಮನದ ಸುದ್ದಿ ಕೇಳಿ ಮಕ್ಕಾದಿಂದ ಪಲಾಯನ ಮಾಡಿದರು ಎಂಬುದರಲ್ಲಿ ಸಂದೇಹವಿಲ್ಲ. ಆದರೆ, ಅವರು ತಮಗೆ ವಿಧಿಸಲಾದ ಮರಣದಂಡನೆಯ ಕಾರಣದಿಂದ ಓಡಿಹೋದರು ಎಂಬುದು ಕೇವಲ ಇಬ್ನ್ ಇಸ್‌ಹಾಖ್‌ರ ಊಹೆಯಾಗಿದೆ. ಮಕ್ಕಾ ವಿಜಯದ ಸಮಯದಲ್ಲಿ ಕೇವಲ ಕೆಲವು ವ್ಯಕ್ತಿಗಳಿಗೆ ಮಾತ್ರವೇ ಮರಣದಂಡನೆಯನ್ನು ವಿಧಿಸಲಾಗಿತ್ತು. ಆ ಕೆಲವೇ ವ್ಯಕ್ತಿಗಳು ಯಾರು ಎಂದರೆ, ಹಝ್ರತ್ ಮಸೀಹ್ ಮೌಊದ್(ಅ) ಹೇಳಿರುವಂತೆ, ಅವರಿಗೆ ಶಿಕ್ಷೆ ನೀಡಲು ಅಲ್ಲಾಹನ ಕಡೆಯಿಂದ ಖಚಿತ ಆದೇಶ ಬಂದಿತ್ತು. ಅನಂತರ ಈ ಶಾಪಗ್ರಸ್ತರನ್ನು ಹೊರತುಪಡಿಸಿ, ಪ್ರತಿಯೊಬ್ಬ ಶತ್ರುವಿನ ಅಪರಾಧವನ್ನು ಕ್ಷಮಿಸಲಾಯಿತು. ಇದಾಗಿದೆ ಇದರ ನಿಜಸ್ಥಿತಿ. ಆದ್ದರಿಂದ, ನಿಂದನೀಯ ಮಾತುಗಳು ಮತ್ತು ಪ್ರವಾದಿನಿಂದೆಯ ಕಾರಣದಿಂದ ಇಷ್ಟು ಜನರನ್ನು ವಧಿಸಲಾಗಿತ್ತು ಎಂದು ಹೇಳುವುದು ಸಂಪೂರ್ಣವಾಗಿ ತಪ್ಪು ಮಾತಾಗಿದೆ. ಉಳಿದ ಭಾಗವನ್ನು ಮುಂದಿನ ಬಾರಿ ವಿವರಿಸುತ್ತೇನೆ. ಇನ್‌ಶಾ ಅಲ್ಲಾಹ್.

(ಹುಝೂರ್ ಅನ್ವರ್ ಹೇಳಿದರು:) ಲೋಕದ ಪರಿಸ್ಥಿತಿ ನಿಮಗೆ ಗೊತ್ತೇ ಇದೆ. ಅದಕ್ಕಾಗಿ ನೀವು ದುಆ ಮಾಡುವುದನ್ನು ಮುಂದುವರಿಸಬೇಕು. ಇದಕ್ಕೂ ಮೊದಲು ನಾನು ಅನೇಕ ಬಾರಿ ಹೇಳಿದ್ದೇನೆ ಮತ್ತು ಹೇಳುತ್ತಲೇ ಬಂದಿದ್ದೇನೆ. ತುರ್ತು ಪರಿಸ್ಥಿತಿಗಳಿಗಾಗಿ, ಸಾಧ್ಯವಿರುವವರು ಕೆಲವು ತಿಂಗಳುಗಳ ಆಹಾರ ವಸ್ತುಗಳನ್ನು ಮನೆಯಲ್ಲಿ ಇಟ್ಟುಕೊಳ್ಳಬೇಕು. ಈಗ ಕೆಲವು ಸರಕಾರಗಳು ಕೂಡ ತಮ್ಮ ಜನರೊಡನೆ ಮೂರು ತಿಂಗಳ ರೇಶನ್ ಸಾಧನಗಳನ್ನು ಇಟ್ಟುಕೊಳ್ಳುವಂತೆ ಹೇಳಿವೆ. ಅಲ್ಲಾಹನು ಲೋಕದ ಮೇಲೆ ಕರುಣೆ ತೋರಲಿ ಮತ್ತು ಯುದ್ಧದ ಅಪಾಯಕಾರಿ ಹಾಗೂ ಭಯಾನಕ ಪರಿಸ್ಥಿತಿಗಳಿಂದ ರಕ್ಷಿಸಲಿ.

ಖುತ್ಬದ ಕೊನೆಯಲ್ಲಿ ಹುಝೂರ್, ಇತ್ತೀಚೆಗೆ ನಿಧನರಾದ ರಾಜಾ ಅಬ್ದುಲ್ ಮಾಲಿಕ್ ಸಾಹಿಬ್‌ರ ಪತ್ನಿ ಅಮತುನ್ನಸೀರ್ ನಿಗ್‌ಹತ್ ಸಾಹಿಬ ಅವರ ಕುರಿತು ಪ್ರಸ್ತಾಪಿಸಿದರು. ಅವರು ಹಝ್ರತ್ ಮಿರ್ಝಾ ಶರೀಫ್ ಅಹ್ಮದ್ ಸಾಹಿಬ್(ರ)ರ ಮತ್ತು ಹಝ್ರತ್ ನವಾಬ್ ಅಮತುಲ್ ಹಫೀಝ್ ಬೇಗಮ್

ಸಾಹಿಬ[ರ]ರ ಮೊಮ್ಮಗಳು ಮತ್ತು ಕರ್ನಲ್ ಮಿರ್ಝಾ ದಾವೂದ್ ಅಹ್ಮದ್ ಸಾಹಿಬ್‌ರ ಪುತ್ರಿಯೂ ಆಗಿದ್ದರು. ಅದೇ ರೀತಿ ಘಾನಾದ ಮಾಜಿ ಹೆಡ್‌ಮಾಸ್ಟರ್, ಸೀನಿಯರ್ ಸ್ಕೂಲ್ ಮತ್ತು ಘಾನಾದ ನ್ಯಾಷನಲ್ ಸೆಕ್ರೆಟರಿ ತಬ್ಲೀಗ್ ಆಗಿದ್ದ ಮುಕರ್ರಮ್ ಅಲ್ ಹಾಜ್ ಯಾಕೂಬ್ ಅಹ್ಮದ್ ಬಿನ್ ಅಬೂ ಬಕರ್ ಸಾಹಿಬ್‌ರ ಬಗ್ಗೆ ಪ್ರಸ್ತಾಪಿಸಿದರು ಮತ್ತು ಅವರ ಜನಾಝಾ ಗಾಯಿಬ್ ನಮಾಝ್ ನಿರ್ವಹಿಸುವುದಾಗಿ ಹೇಳಿದರು.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ

مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ

فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ

عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُبِالْعَدْلِ وَالْاِحْسَانِ وَاِيْتَاءِ ذِى الْقُرْبٰى

وَيَنْهٰى عَنِ الْفَحْشَآءِ وَالْمُنْكَرِ وَالْبَغْىِ يَعِظُكُمْ لَعَلَّكُمْ تَذَكَّرُوْنَ ٥ اُذْكُرُوااللّٰهَ

يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis*** *(atba)*

At, ***'Masjid Mubarak',*** *Islamabad, Tilford,* U.K. On 11-07-2025

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha'at Team for Nazarath Nashr-O-Isha'ath, Qadian

***Email****: khutuba.kannada@gmail.com*

**You can find all the Sermons archived at**: www.alislam.org/friday-sermon